* Govt order copy of Approval to S.S. Muttinpendimath Dept of Botany with effect from 30.11.1992 (SL. NO 07 To be reffered)

784

S.P.V.V.S.S.
G. P. Porwal Arts Sc & Commerce College SINDGI (Bijapur)
Inward No. 784
Date ...

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಿಂದಗಿಯ ಜೆ.ಪಿ.ಪೋರವಾಲ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿಯ ವಿಜ್ಞಾನ ವಿಷಯಗಳ ಉಪನ್ಯಾಸಕರ ನೇಮಕಾತಿಯನ್ನು ಸರ್ಕಾರದ ನೇರ ವೇತನಾನುದಾನದ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ.

ಓದಲಾಗಿದೆ:1) ದಿನಾಂಕ: 15.6.88ರ ಸರ್ಕಾರ ಪತ್ರ ಸಂಖ್ಯೆ: ಇಡಿ 16 ಯುಪಿಸಿ 87

2) ಕಾಲೇಜು ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ: ಡಿಸಿಇ-114-ಜಿಎಂಡಿ-ಪಿಸಿಸಿ-1:95-96 ದಿನಾಂಕ:19.8.95

**ಪ್ರಸ್ತಾವನೆ:**

ಮೇಲೆ ಕ್ರಮಾಂಕ(1)ರಲ್ಲಿ ಓದಲಾದ ದಿನಾಂಕ:15.6.88ರ ಸರ್ಕಾರಿ ಪತ್ರದ ಪ್ರಕಾರ ಸಿಂದಗಿಯ ಜೆ.ಪಿ.ಪೋರವಾಲ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ವಿಜ್ಞಾನ ಪದವಿ ವಿಭಾಗವನ್ನು 1988-89ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ. ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ: 19.8.95ರ ಕಾಲೇಜು ಶಿಕ್ಷಣ ನಿರ್ದೇಶಕರ ಪ್ರಸ್ತಾವನೆಯ ವರದಿ ಪ್ರಕಾರ ಸದರಿ ಮಹಾವಿದ್ಯಾಲಯದಲ್ಲಿನ ವಿಜ್ಞಾನ ಪದವಿ ವಿಭಾಗವನ್ನು 1988-89ರಲ್ಲಿ ಪ್ರಾರಂಭಿಸಿದ್ದು, 7 ವರ್ಷಗಳ ಅನುದಾನರಹಿತ ಅವಧಿಯನ್ನು 1995-96ನೇ ಶೈಕ್ಷಣಿಕ ಸಾಲಿಗೆ ಪೂರ್ಣಗೊಳಿಸಿರುವುದರಿಂದಾಗಿ, ವಿಜ್ಞಾನ ಪದವಿ ವಿಭಾಗವನ್ನು ನೇರ ವೇತನಾನುದಾನಕ್ಕೆ ಒಳಪಡಿಸಲು ಅರ್ಹತೆಯಿರುವುದಾಗಿ ಕಾಲೇಜು ಶಿಕ್ಷಣ ನಿರ್ದೇಶಕರು ಸರ್ಕಾರದ ಆದೇಶವನ್ನು ಕೋರಿದ್ದರು. ವಿಜ್ಞಾನ ಪದವಿ ವಿಭಾಗವು 1988-89ನೇ ಸಾಲಿನಲ್ಲಿ ಪ್ರಾರಂಭಿಸಿರುವುದರಿಂದ ವೇತನಾನುದಾನಕ್ಕೆ ಒಳಪಡಿಸಲು ಬರುವುದಿಲ್ಲವೆಂದು ಸರ್ಕಾರಿ ಪತ್ರ ಸಂಖ್ಯೆ: ಇಡಿ 237 ಯುಪಿಸಿ 95 ದಿನಾಂಕ: 10.06.96ರಂದು ಕಾಲೇಜು ಶಿಕ್ಷಣ ಆಯುಕ್ತರಿಗೆ ತಿಳಿಸಲಾಗಿತ್ತು. ಕಾಲೇಜು ಶಿಕ್ಷಣ ನಿರ್ದೇಶಕರ ದಿನಾಂಕ: 19.8.95ರ ಪ್ರಸ್ತಾವನೆಯನ್ನು ಸರ್ಕಾರವು ಪುನರ್ ಪರಿಶೀಲಿಸಿದ್ದು, ಕಲಾ ಮತ್ತು ವಾಣಿಜ್ಯ ವಿಭಾಗಗಳನ್ನು ಈಗಾಗಲೇ ವೇತನಾನುದಾನಕ್ಕೆ ಒಳಪಡಿಸಿರುವುದರಿಂದ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲು ಯಾವುದೇ ಪೂರ್ವಾಪರ ಷರತ್ತುಗಳಿಲ್ಲದೆ ಬಹಳ ಹಿಂದೆಯೇ ಸರ್ಕಾರ ಅನುಮತಿ ನೀಡಿರುವುದನ್ನು ಮನಗಂಡು ಖಾಸಗಿ ಕಾಲೇಜುಗಳ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಇದ್ದ ನಿರ್ಬಂಧವನ್ನು ಈಗ ತೆಗೆದುಹಾಕಿರುವುದರಿಂದ ಮತ್ತು ಈಗ ಬೋಧಕ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸಬೇಕಾಗಿರುವುದರಿಂದಾಗಿ, ಸದರಿ ಕಾಲೇಜಿನ ವಿಜ್ಞಾನ ವಿಭಾಗದ ಭೋದಕ ವೃಂದದಲ್ಲಿ ವಾಸ್ತವವಾಗಿ ಈ ದಿನಾಂಕದಂದು ಕಾರ್ಯನಿರ್ವಹಿಸುತ್ತಿರುವ ಬೋಧಕರಿಗೆ ಮಾತ್ರ ಮಿತಿಗೊಳಿಸಿ, ಅಂದರೆ ಆದೇಶ ಭಾಗದಲ್ಲಿ ವಿವರಿಸಿರುವ ಹುದ್ದೆಗಳ ಎದುರಾಗಿ ಕಾರ್ಯನಿರ್ವಹಿಸುತ್ತಿರುವ ಬೋಧಕರುಗಳನ್ನು 1995-96ನೇ ಶೈಕ್ಷಣಿಕ ಸಾಲಿನಿಂದ ಅಂದರೆ, ದಿನಾಂಕ:1.6.95ರ ದಿನಾಂಕದಿಂದ ಕಾಲ್ಪನಿಕವಾಗಿ ವೇತನ ನಿಗಧಿಪಡಿಸಿ ಯಾವುದೇ ಬಾಕಿ ದೊರೆಯದಂತೆ ಈ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯಗಳು ಲಭ್ಯವಾಗುವಂತೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

Chairman,
Sri Padmaraj Vidya Vardhak Samstha Sarangamath SINDGI

**ಸರ್ಕಾರಿ ಆದೇಶ ಸಂಖ್ಯೆ: ಇಡಿ 319 ಯುಪಿಸಿ 2003, ಬೆಂಗಳೂರು ದಿನಾಂಕ:06.03.2004**

ಸಿಂದಗಿಯ ಜೆ.ಪಿ.ಪೋರವಾಲ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿನ ವಿಜ್ಞಾನ ವಿಭಾಗದ ಈ ಕೆಳಕಂಡ ಬೋಧಕ ಸಿಬ್ಬಂದಿಗಳನ್ನು ದಿನಾಂಕ:1.6.95ರಿಂದ ಜಾರಿಗೆ ಬರುವಂತೆ ಕಾಲ್ಪನಿಕವಾಗಿ ವೇತನ ನಿಗಧಿಪಡಿಸಿ ಯಾವುದೇ ಬಾಕಿ ಸಿಗದಂತೆ (No arrears) ಈ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯಗಳು ಲಭ್ಯವಾಗುವಂತೆ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ವೇತನಾನುದಾನಕ್ಕೆ ಒಳಪಡಿಸಿ ಆದೇಶಿಸಲಾಗಿದೆ. ಭರಿಸಬೇಕಾದ ವೆಚ್ಚವನ್ನು ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಒದಗಿಸಲಾಗಿರುವ ಆಯವ್ಯಯದ ಮಿತಿಯೊಳಗೆ ಭರಿಸತಕ್ಕದ್ದು.

| ಕ್ರಮ ಸಂಖ್ಯೆ | ವಿಷಯ | ಉಪನ್ಯಾಸಕರ ಹೆಸರು ಶ್ರೀ:ಶ್ರೀಮತಿ | ಸೇವೆಗೆ ಸೇರಿದ ದಿನಾಂಕ: |
|---|---|---|---|
| 1 | 2 | 3 | 4 |
| 1 | ಗಣಿತಶಾಸ್ತ್ರ | ಆರ್.ಎಸ್.ಭೂಶೆಟ್ಟಿ | 19.07.1990 |
| 2 | ಸಸ್ಯಶಾಸ್ತ್ರ | ಎಸ. ಬಿ. ಗವಡಪ್ಪಗೋಳ | 20-07-1990 |
| 3 | ಪ್ರಾಣಿಶಾಸ್ತ್ರ | ಡಿ.ಎಂ.ಪಾಟೀಲ | 20.07.1990 |

Scanned with OKEN Scanner

| | Dept. of Botany | Name of faculty | Date of Joining |
|---|---|---|---|
| 4 | ಭೌತಶಾಸ್ತ್ರ | ಎಂ.ಹೆಚ್.ಲೋಣಿ | 05.09.1990 |
| 5 | ಗಣಿತಶಾಸ್ತ್ರ | ಎಂ.ಡಿ.ಪಾಟೀಲ | 27.11.1992 |
| 6 | ಪ್ರಾಣಿಶಾಸ್ತ್ರ | ಡಿ.ಎಂ.ಸರಶೆಟ್ಟಿ | 28.11.1992 |
| 7 | ಸಸ್ಯಶಾಸ್ತ್ರ | ಎಸ್.ಎಸ್.ಮುತ್ತಿನಪೆಂಡಿಮಠ (S.S. Muttinpendimath) | 30.11.1992 |

1) ಆದೇಶ ಸಂಖ್ಯೆ:ಇಡಿ 146 ಯುಪಿಸಿ 79 ದಿನಾಂಕ:03.10.81 ಮತ್ತು ಈ ಸಿಟ್ಟಿನಲ್ಲಿ ಆಗಿಂದಾಗ್ಗೆ ಹೊರಡಿಸಿರುವ ತಿದ್ದುಪಡಿ ಹಾಗೂ ಸ್ಪಷ್ಟೀಕರಣಗಳಿಗೆ ನಿಗಧಿಪಡಿಸಿದ ಕಾರ್ಯಭಾರವನ್ನು ಹೊಂದಿರತಕ್ಕದ್ದು, ಅಲ್ಲದೆ ಮುಂದೆ ಸರ್ಕಾರ ವಿಧಿಸಬಹುದಾದ ಯಾವುದೇ ಷರತ್ತಿಗೊಳಪಟ್ಟಿರತಕ್ಕದ್ದು.
2) ಇನ್ನು ಮುಂದೆ ಭವಿಷ್ಯಾನುಸಾರ ಭರ್ತಿ ಮಾಡಬೇಕಾಗಿರುವ ಹುದ್ದೆಗಳಿಗೆ ಸಕ್ಷಮ ಅಧಿಕಾರಿಯಿಂದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.
3) ನೇರ ನೇಮಕಾತಿ, ಬಡ್ತಿ ಮತ್ತು ವಿದ್ಯಾರ್ಥಿಗಳ ಪ್ರವೇಶದ ವಿಷಯದಲ್ಲಿ ಕಾಲಕಾಲಕ್ಕೆ ಹೊರಡಿಸುವ ಸರ್ಕಾರಿ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
4) ಪ್ರವೇಶಾವಕಾಶದಲ್ಲಿ ನಿಗಧಿಪಡಿಸಿರುವ ವಿದ್ಯಾರ್ಥಿಗಳ ಕನಿಷ್ಠ ಪ್ರಮಾಣವನ್ನು ವಿವರವಾಗಿ ಅನುಸರಿಸತಕ್ಕದ್ದು.
5) ಮುಂದೆ ಉದ್ಭವಿಸುವ ಹುದ್ದೆಗಳನ್ನು ಬ್ಯಾಕ್ ಲಾಗ್ ರಿಕ್ತಸ್ಥಾನಗಳೆಂದು ಪರಿಗಣಿಸಿ ಅವುಗಳನ್ನು ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಮೀಸಲಾತಿಯ ಅನುಪಾತದನ್ವಯ ರಿಕ್ತಸ್ಥಾನ ತುಂಬುವತನಕ ಮುಂದುವರಿಸಿ ನೇಮಕಾತಿ ಮಾಡತಕ್ಕದ್ದು ಮತ್ತು ಈ ದಿಸೆಯಲ್ಲಿ ಸರ್ಕಾರವು ಆಗಿಂದಾಗ್ಗೆ ಹೊರಡಿಸುವ ಆದೇಶಗಳನ್ನು ಪಾಲಿಸತಕ್ಕದ್ದು.
6) ಸದರಿ ಕಾಲೇಜಿನಲ್ಲಿ ಇನ್ನು ಮುಂದೆ ನೌಕರರ ರಾಜೀನಾಮೆ, ನಿವೃತ್ತಿ ಮತ್ತು ನಿಧನದಿಂದ ತೆರವಾದ ಬೋಧಕ ಹುದ್ದೆಗಳನ್ನು ತುಂಬುವಾಗ ಸರ್ಕಾರದ ಮೀಸಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
7) ಅನುಮೋದಿತ ಹುದ್ದೆಗಳಿಗೆ ವೇತನಾನುದಾನ ಬಿಡುಗಡೆ ಮಾಡುವ ಮುನ್ನಾ ನಿಯಮಗಳ ಪ್ರಕಾರ ವಯೋಮಿತಿ : ವಿದ್ಯಾರ್ಹತೆ ಮತ್ತಿತರ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ವೇಣು ಕಿಶೋರ್)
ಸರ್ಕಾರದ ಉಪ ಕಾರ್ಯದರ್ಶಿ-4,
6/3/04 ಶಿಕ್ಷಣ ಇಲಾಖೆ.

ಗೆ

1) ಕರ್ನಾಟಕ ಮಹಾಲೇಖಪಾಲರು ( ಎ ಮತ್ತು ಇ), ಬೆಂಗಳೂರು
2) ಕಾಲೇಜು ಶಿಕ್ಷಣ ಆಯುಕ್ತರು, ಬೆಂಗಳೂರು
3) ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು
4) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ
5) ಪ್ರಾಂಶುಪಾಲರು, ಜಿ.ಪಿ.ಪೋರವಾಲ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಸಿಂಧಗಿ
6) ಸಂಬಂಧಪಟ್ಟ ಉಪನ್ಯಾಸಕರು, ಜಿ.ಪಿ.ಪೋರವಾಲ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಸಿಂಧಗಿ
7) ಶಾಖಾ ರಕ್ಷಾ ಕಡತ : ಬಿಡಿ ಪ್ರತಿಗಳು

ಪ್ರತಿಗಳು:

1) ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ
2) ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
3) ಶಿಕ್ಷಣ ಇಲಾಖೆಯ ಉಪ ಕಾರ್ಯದರ್ಶಿ-4 ರವರ ಆಪ್ತ ಸಹಾಯಕರು

ಕಿಶೋರ್))

Chairman,
Shri Padmaraj Vidya Vardhak
Samstha Sarangamath SINDGI.

Scanned with OKEN Scanner

☎ :08488-221319

**SHRI PADMARAJ VIDYAVARDHAK SAMSTHA SARANGAMATH**

Dist: BIJAPUR) SINDGI – 586128 (KARNATAK STATE

Ref. No. SPVVSS/GPP/MFL/App-order/2022-23/109 Date: 10.10.2022

## OFFICE ORDER

Miss. **Jyoti Angadi** is appointed as Management Full-Time Lecturer in **Botany** on purely temporary basis in SPVVS G. P. Porwal Arts, Comm, & V. V. Salimath Science College, Sindgi.

**Conditions**

1. You should join the service immediately.
2. You shall carry on duties assigned by the Principal.
3. You shall obey all the standing orders, rules and regulations of institution as may be in force from time to time.
4. You shall be terminated at any time without prior notice.
5. You shall not leave the service in the middle of the year.

**Copy to:** 1. Miss. Jyoti Angadi

2. The Principal, SPVVS G. P. Porwal Arts, Comm, & V. V. Salimath Science College, Sindgi.

3. Office Copy

Chairman,
Shri Padmaraj Vidya Vardhak
Samstha Sarangamath SINDGI.

Scanned with OKEN Scanner

:08488-221319

# SHRI PADMARAJ VIDYAVARDHAK SAMSTHA SARANGAMATH

Dist: BIJAPUR) SINDGI – 586128 (KARNATAK STATE

Ref. No. SPVVSS/GPP/MFL/App-order/2022-23/109 Date: 10.10.2022

## OFFICE ORDER

Shri. **Sunil Natikar** is appointed as Management Full-Time Lecturer in **Botany** on purely temporary basis in SPVVS G. P. Porwal Arts, Comm, & V. V. Salimath Science College, Sindgi.

### Conditions

1. You should join the service immediately.
2. You shall carry on duties assigned by the Principal.
3. You shall obey all the standing orders, rules and regulations of institution as may be in force from time to time.
4. You shall be terminated at any time without prior notice.
5. You shall not leave the service in the middle of the year.

**Copy to:** 1. Shri. Sunil Natikar

2. The Principal, SPVVS G. P. Porwal Arts, Comm, & V. V. Salimath Science College, Sindgi.

3. Office Copy

Chairman,
Shri Padmaraj Vidya Vardhak
Samstha Sarangamath SINDGI.

Scanned with OKEN Scanner